ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 972

ಮಾನ್ಯ ವಿಧಾನಪರಿಷತ್ತಿನ ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 13.03.2020

ಉತ್ತರಿಸಬೇಕಾದ ಸಚಿವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಪ್ರಶ್ನೆ	:	ಉತ್ತರ
ಅ) ಕಲಬುರುಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬರುವ ಗ್ರಾಮ ಪಂಚಾಯತ್ ಗಳಿಂದ ಡಿಮೆಂಡ್ ಪುಸ್ತಕದನ್ವಯ ಇಲ್ಲಿಯವರೆಗೆ ವಸೂಲಿಯಾಗಬೇಕಾಗಿರುವ ಬಾಕಿ ತೆರಿಗೆಯ ಮೊತ್ತ ಎಷ್ಟು;		ಕಲಬುರುಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬರುವ ಗ್ರಾಮ ಪಂಚಾಯತ್ ಗಳಿಂದ ಡಿಮಾಂಡ್ ಪುಸ್ತಕದನ್ವಯ ಇಲ್ಲಿಯವರೆಗೆ ವಸೂಲಿಯಾಗ ಬೇಕಾಗಿರುವ ಬಾಕಿ ತೆರಿಗೆಯು ಈ ಕೆಳಕಂಡಂತಿದೆ: ಕ್ರ ಸಂ | ಜಿಲ್ಲೆ | ವಸೂಲಿಯಾಗಬೇಕಾಗಿರುವ ಬಾಕಿ ತೆರಿಗೆ (ರೂ.ಲಕ್ಷಗಳಲ್ಲಿ) 1 | ಕಲಬುರುಗಿ | ರೂ.6500.17 2 | ಯಾದಗಿರಿ | ರೂ.3389.55
ಆ) ಸರ್ಕಾರ ಯಾವ ಮಾನದಂಡದ ಆಧಾರದ ಮೇಲೆ ತೆರಿಗೆ ಪಾವತಿಯ ದರವನ್ನು ನಿಗದಿಪಡಿಸುತ್ತದೆ;		ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 44)ರ 1ನೇ ಪ್ರಕರಣ (2) ರ ಪ್ರಕಾರ ಪ್ರತಿಯೊಂದು ಗ್ರಾಮ ಪಂಚಾಯತಿಯು IVನೇ ಅನುಸೂಚಿ ಯಲ್ಲಿ ನಿರ್ಧಿಷ್ಟಪಡಿಸಿರುವ ಗರಿಷ್ಠ ದರವನ್ನು ಮೀರದಂತೆ, ಪಂಚಾಯತಿ ಪ್ರದೇಶದ ಪರಿಮಿತಿಯೊಳಗಿರುವ, ಕೃಷಿ ತೆರಿಗೆ ನಿರ್ಧರಣೆಗೆ ಒಳ ಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ (ಸ್ವತಿನ ಬಂಡವಾಳ ಮೌಲ್ಯದ ಆಧಾರದಲ್ಲಿ) ತೆರಿಗೆ ದರವನ್ನು ನಿಗದಿಪಡಿಸಲಾಗುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ : 483 ಗ್ರಾಪಂಅ 2019 ದಿನಾಂಕ 24.07.2019ರಂತೆ ಗ್ರಾಮ ಪಂಚಾಯತಿಗಳ ಕೈಗಾರಿಕೆ ಕಟ್ಟಡಗಳಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ, 1993ರ ಪ್ರಕರಣ 199 ಮತ್ತು ಅನುಸೂಚಿ ರಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ದರವಾದ ಶೇ.0.4 ರಿಂದ ಗರಿಷ್ಠ 0.6ರ ವರೆಗೆ ವಿಧಿಸಿ ತೆರಿಗೆ ನಿರ್ಧರಣೆ ಮಾಡಲಾಗುವುದು.
ಇ) ಎಲ್ಲಾ ಗ್ರಾಮ ಪಂಚಾಯತ್ ಗಳಲ್ಲಿ ಏಕ ರೂಪ ತೆರಿಗೆ ದರ ಇದೆಯೇ? (ಇದ್ದಲ್ಲಿ ವರ್ಗಾವಾರು ತೆರಿಗೆಯ ವಿವರಗಳನ್ನು ನೀಡುವುದು)		ಗ್ರಾಮ ಪಂಚಾಯತಿಗಳು IV ನೇ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿರುವ ಗರಿಷ್ಟ ದರವನ್ನು ಮೀರದಂತೆ ಮತ್ತು ಗೊತ್ತುಪಡಿಸಬಹುದಾದ ರೀತಿಯಲ್ಲಿ ಉಪ ವಿಧಿಗಳ ಮೂಲಕ ತೆರಿಗೆ ದರ ನಿರ್ಧರಿಸಲಾಗುತ್ತದೆ. (ವರ್ಗಾವಾರು ತೆರಿಗೆಯ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ).

ಸಂಖ್ಯೆ : ಗ್ರಾಅಪ 189 ಜಿಪಿಎಸ್ 2020 ದಿನಾಂಕ : 11.03.2020

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 972ರ ಅನುಬಂಧ

ಅನುಸೂಚಿ IV
(199ನೇ ಪ್ರಕರಣವನ್ನು ನೋಡಿ)

ಸ್ವತಿನ ಮೇಲೆ ತೆರಿಗೆ

ಕಟ್ಟಡಗಳ ಮೇಲೆ ತೆರಿಗೆ

ಎ	ಕಟ್ಟಡಗಳ ಮೇಲೆ ತೆರಿಗೆ	ವಾರ್ಷಿಕ ದರ
	(i) ನಿವಾಸಿ ಕಟ್ಟಡಗಳು	ಸ್ವತಿನ ಮೂಲ ಮೌಲ್ಯದ ಮೇಲೆ 0.05% ಕ್ಕಿಂತ ಕಡಿಮೆಯಿಲ್ಲದ ಆದರೆ 0.10% ಕ್ಕಿಂತ ಹೆಚ್ಚಲ್ಲದೆ
	(ii) ವಾಣಿಜ್ಯ ಕಟ್ಟಡಗಳು	ಸ್ವತಿನ ಮೂಲ ಮೌಲ್ಯದ ಮೇಲೆ 0.20% ಕ್ಕಿಂತ ಕಡಿಮೆಯಿಲ್ಲದ ಆದರೆ 0.5% ಕ್ಕಿಂತ ಹೆಚ್ಚಲ್ಲದೆ
	(iii) ಕೈಗಾರಿಕೆಗಳು, ಕಾರ್ಖಾನೆಗಳು, ಐಟಿ ಪಾರ್ಕ್‌ಗಳು, ಹಾರ್ಡ್‌ವೇರ್ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್, ಬಯೋಟೆಕ್ ಪಾರ್ಕ್, ಪವರ್ ಪ್ಲಾಂಟ್ಸ್, ಹೈಡ್ರೋ ಥರ್ಮಲ್, ಸೋಲಾರ್ ಸ್ಥಾವರಗಳು, ವಿಂಡ್‌ಮಿಲ್ಸ್ ಮತ್ತು ಏರ್‌ಪೋರ್ಟ್ ಮತ್ತು ಇವುಗಳಿಗೆ ಸಂಬಂಧಿಸಿದ ಪ್ರದೇಶ ಇತ್ಯಾದಿಗಳು (ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ ವಿಶೇಷ ಆರ್ಥಿಕ ವಲಯ (SEZ) ಮತ್ತು ಇತರ ಕೈಗಾರಿಕೆ ಪ್ರದೇಶ ಅಥವಾ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸ ಬಹುದಾದ ವಲಯಗಳು)	ಕೈಗಾರಿಕೆ ಕಟ್ಟಡಗಳಿಗೆ ಕನಿಷ್ಠ ದರವಾದ ಶೇ.0.4 ರಿಂದ ಗರಿಷ್ಠ 0.6ರ ವರೆಗೆ ಕೈಗಾರಿಕೆಗಳ ವರ್ಗ — ವಿಧಿಸಬಹುದಾದ ತೆರಿಗೆ ಪ್ರಮಾಣ ಅತಿಸಣ್ಣ ಕೈಗಾರಿಕೆ ಅಥವಾ ಇತರ ಅತಿ ಸಣ್ಣ ಘಟಕಗಳಿಗೆ ಮತ್ತು ಸಣ್ಣ ಕೈಗಾರಿಕೆ ಅಥವಾ ಇತರ ಸಣ್ಣ ಘಟಕಗಳಿಗೆ — ಶೇ.0.4 ಮಧ್ಯಮ ಕೈಗಾರಿಕೆ ಅಥವಾ ಮಧ್ಯಮ ಘಟಕಗಳಿಗೆ — ಶೇ.0.5 ಭಾರಿ ಕೈಗಾರಿಕೆ ಅಥವಾ ಭಾರಿ ಘಟಕಗಳಿಗೆ — ಶೇ.0.6 ಖಾಲಿ ಇರುವ ಜಾಗದಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಬಳಸುವ ಜಾಗಕ್ಕೆ — ಶೇ.0.05 ಉಳಿದಂತೆ ಉಪಯೋಗಿಸದೆ ಇರುವ ಖಾಲಿ ಜಾಗಕ್ಕೆ — ಶೇ.0.02
ಬಿ	ಈ ಮುಂದಿನ ಅಳತೆಯುಳ್ಳ ಖಾಲಿ ಜಮೀನು, ಎಂದರೆ:– ಎ. 1000 ಚ.ಮೀ. ಗಿಂತ ಹೆಚ್ಚಲ್ಲದ	ಸ್ವತಿನ ಮೂಲ ಮೌಲ್ಯದ ಮೇಲೆ 0.05% ಕ್ಕಿಂತ ಕಡಿಮೆಯಿಲ್ಲದ ಆದರೆ 0.1% ಕ್ಕಿಂತ ಹೆಚ್ಚಲ್ಲದೆ
	ಬಿ. 1000 ಚ.ಮೀ. ಗಿಂತ ಹೆಚ್ಚಿನ ಆದರೆ 4000 ಚ.ಮೀ.ಗಿಂತ ಕಡಿಮೆ	ಸ್ವತಿನ ಮೂಲ ಮೌಲ್ಯದ ಮೇಲೆ 0.025% ಕ್ಕಿಂತ ಕಡಿಮೆಯಿಲ್ಲದ ಆದರೆ 0.05% ಕ್ಕಿಂತ ಹೆಚ್ಚಲ್ಲದೆ
	ಸಿ. 4000 ಚ.ಮೀ.ಗಿಂತ ಹೆಚ್ಚು	ಸ್ವತಿನ ಮೂಲ ಮೌಲ್ಯದ ಮೇಲೆ 0.01% ಕ್ಕಿಂತ ಕಡಿಮೆಯಿಲ್ಲದ ಆದರೆ 0.02% ಕ್ಕಿಂತ ಹೆಚ್ಚಲ್ಲದೆ
ಸಿ	ಜಾಹಿರಾತುಗಳು ಮತ್ತು ಹೋರ್ಡಿಂಗ್‌ಗಳ ಮೇಲೆ ತೆರಿಗೆ; ಪ್ರತಿ ಚ.ಮೀ.ಗೆ ಅಥವಾ ಅದರ ಭಾಗಕ್ಕೆ	ತಿಂಗಳೊಂದಕ್ಕೆ ಐದು ರೂಪಾಯಿ
ಡಿ	ಮೊಬೈಲ್ ಟವರ್‌ಗಳ ಮೇಲೆ ತೆರಿಗೆ	ವಾರ್ಷಿಕ ಪ್ರತಿ ಟವರಿನ ಮೇಲೆ ಹನ್ನೆರಡು ಸಾವಿರ ರೂಪಾಯಿಗಳು
ಇ	ವಿಂಡ್‌ಮಿಲ್‌ಗಳ ಮೇಲೆ ತೆರಿಗೆ	ಟರ್ಬೈನ್‌ಗಳನ್ನು ಆಧರಿಸಿ ವಾರ್ಷಿಕ 0.5 ರಿಂದ 1 ಲಕ್ಷ
ಎಫ್	ಸೋಲಾರ್ ಪಾರ್ಕ್‌ಗಳ ತೆರಿಗೆ	ಸ್ವತ್ತಿನ ಮೂಲಮೌಲ್ಯದ ಮೇಲೆ 0.50% ಕ್ಕಿಂತ ಕಡಿಮೆಯಿಲ್ಲದ ಆದರೆ 1.50% ಕ್ಕಿಂತ ಹೆಚ್ಚಲ್ಲದೆ

ವಿವರಣೆ :

1. ತೆರಿಗೆಗೆ ಗುರಿಯಾಗುವ ಸ್ವತ್ತಿನ ಮೂಲಮೌಲ್ಯ ಎಂದರೆ (ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ 1957ರ 45 ಬಿ ಪ್ರಕರಣದ ಅಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ನಿರ್ಧರಣೆಯ ಸಮಯದ ಮೌಲ್ಯದ ಸವಕಳಿಯನ್ನು ಕಳೆಯುವುದು).

2. ಕಟ್ಟಡದ ಖಾಲಿ ಜಮೀನು ಅಥವಾ ಅವೆರಡರ ಮೇಲೆ ಪ್ರದೇಶವನ್ನು, ಕಟ್ಟಡದ ನಿರ್ಮಾಣದ ವಿಧಾನ, ಅದರ ಉಪಯೋಗ ಮತ್ತು ಕಟ್ಟಡದ ಆಯಷು ಮತ್ತು ನಿಯಮಿಸಬಹುದಾದ ಅಂತಹ ಇತರ ಯಾವುದೇ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಗಳು ಮತ್ತು ದರಗಳನ್ನು ಅನುಸೂಚಿಯಲ್ಲಿ ನಿಯಮಿಸಲಾದ ತೆರಿಗೆಯ ನಿರ್ಧರಣೆ.

ಜಿ	ಮನೋರಂಜನೆಗಳ ಮೇಲೆ ಶುಲ್ಕ	ಪ್ರತಿ ಪ್ರದರ್ಶನಕ್ಕೆ ಐವತ್ತು ರೂಪಾಯಿಗಳು
ಹೆಚ್	ವಾಹನ ನಿಲುಗಡೆ ಶುಲ್ಕ	ಪ್ರತಿ ದಿನಕ್ಕೆ ರೂಪಾಯಿಗಳಲ್ಲಿ
	(i) ಬಸ್, ಲಾರಿ ಮುಂತಾದವುಗಳು	50/–
	(ii) ಕಾರ್ ಮತ್ತು ಲಘು ಮೋಟಾರು ವಾಹನಗಳು	20/–
	(iii) ಮೋಟಾರು ಸೈಕಲ್	10/–
	(iv) ಸ್ಪ್ರಿಂಗ್‌ಉಳ್ಳ ಇತರ ವಾಹನ	3/–
	(v) ಸ್ಪ್ರಿಂಗ್ ಇಲ್ಲದಿರುವ ಪ್ರತಿಯೊಂದು ಗಾಡಿ ಮತ್ತು ಇತರ ವಾಹನ	2/–
	(vi) ಪ್ರತಿಯೊಂದು ಬೈಸೈಕಲ್ ಮತ್ತು ತ್ರಿಚಕ್ರವಾಹನ	1/–
ಐ	ಮಾರುಕಟ್ಟೆಗಳ ಮೇಲೆ ಶುಲ್ಕ	
	(i) ಒಂದು ಚದುರ ಮೀಟರ್‌ಗಿಂತ ಹೆಚ್ಚಲ್ಲದ ಪ್ರತಿಯೊಂದು ಪ್ಲಾಟಿನ ಮೇಲೆ	ಪ್ರತಿ ದಿನಕ್ಕೆ ಐದು ರೂಪಾಯಿ
	(ii) ಪ್ರತಿ ಹೆಚ್ಚಿನ ಚದುರ ಮೀಟರ್ ಅಳತೆಯುಳ್ಳ ಪ್ಲಾಟ್ ಅಥವಾ ಅದರ ಭಾಗಕ್ಕೆ	ಪ್ರತಿ ದಿನಕ್ಕೆ ಎರಡು ರೂಪಾಯಿ
	(iii) ಯಾವುದೇ ಸರಕಿನ ಪ್ರತಿ ಬಾಸ್ಕೆಟ್ ಅಥವಾ ಬ್ಯಾಗಿನ ಮೇಲೆ	ಪ್ರತಿ ದಿನಕ್ಕೆ ಎರಡು ರೂಪಾಯಿ
	(iv) ಯಾವುದೇ ಸರಕಿನ ಬ್ಯಾಗನ್ನು ಹೇರುವ ಪ್ರತಿ ಗಾಡಿಯ ಮೇಲೆ	ಪ್ರತಿ ದಿನಕ್ಕೆ ಐದು ರೂಪಾಯಿ
ಜೆ	ಪಶುಗಳ ನೋಂದಣಿಯ ಮೇಲೆ ಶುಲ್ಕ	
	ಸಂತೆಗಳು ಮತ್ತು ಜಾತ್ರೆಗಳಲ್ಲಿ ಮಾರಾಟಕ್ಕಾಗಿ ತಂದ ಪ್ರತಿ ಪಶುವಿನ ಮೇಲೆ	ಪ್ರತಿ ದಿನಕ್ಕೆ ಐದು ರೂಪಾಯಿ
	ಮೇಯಿಸುವ ಜಮೀನಿನಲ್ಲಿ ಪಶುಗಳನ್ನು ಮೇಯಿಸುವುದಕ್ಕೆ ಶುಲ್ಕ	ಪ್ರತಿ ತಿಂಗಳಿಗೆ ಐದು ರೂಪಾಯಿ
	ಆಪ್ಟಿಕಲ್ ಫೈಬರ್ಸ್ ಕೇಬಲ್‌ಗಳನ್ನು ಹಾಕುವುದಕ್ಕಾಗಿ ರಸ್ತೆಗಳನ್ನು ತೋಡುವುದಕ್ಕಾಗಿ ಶುಲ್ಕ	ಮೂರು ನಾಳಗಳಿಗೆ ಪ್ರತಿ ಮೀಟರ್‌ಗೆ 450 ರೂಪಾಯಿಗಳು ಲೇಯಿಂಗ್ ಚಾರ್ಜ್ ಹೆಚ್ಚಿನ ನಾಳಗಳಿಗೆ ಪ್ರತಿ ಮೀಟರ್‌ಗ 75 ರೂಪಾಯಿ ಮೇಲ್ವಿಚಾರಣೆ ಚಾರ್ಜ್ ಪ್ರತಿ ಮೀಟರ್‌ಗೆ 75 ರೂಪಾಯಿ ಹಿಂದಿರುಗಿಸಬಹುದಾದ ಭದ್ರತಾ ಠೇವಣಿ ಪ್ರತಿ ಮೀಟರ್‌ಗೆ 119.50 ರೂಪಾಯಿಯಂತೆ